

# ಪಿಂಕ್ ಬನ್ನಿ!



ಮೊಲ ಎಂದಾಕ್ಷಣ ಬಿಳಿಯ ರೋಮವುಳ್ಳ ಪುಟ್ಟ ಕಣ್ಣುಗಳುಳ್ಳ ಮುದ್ದಾದ ಪ್ರಾಣಿಯ ಚಿತ್ರ ನಮ್ಮ ಕಣ್ಣ ಮುಂದೆ ಬರುತ್ತದೆ. ಅದನ್ನು ಪ್ರೀತಿಯಿಂದ 'ಬನ್ನಿ' ಎಂದು ಕರೆಯುತ್ತಾರೆ. ಉತ್ತರ ಇಟಲಿಯ ಪೈಡ್ಮಾಂಟ್ ಪ್ರದೇಶದ 5000 ಅಡಿ ಎತ್ತರದ ಗಿರಿಗಳಲ್ಲಿ ಬೃಹತ್ ಬನ್ನಿ ಬೊಂಬೆಯೊಂದು ಮಲಗಿದೆ. ಗುಲಾಬಿ ಬಣ್ಣದ ಈ ಮೊಲ ಮಲಗಿಕೊಂಡಿದ್ದು, ಕೈ ಕಾಲುಗಳನ್ನು ಆಗಸಕ್ಕೆ ತೆರೆದು ಕೊಂಡಿದೆ. ಆಕಾಶದಿಂದ ಕೆಳಗೆ ಬಿದ್ದು ಆಘಾತ ಮಾಡಿಕೊಂಡಿದೆಯೇನೋ ಎನ್ನಿಸುವ ಈ ಮೊಲವನ್ನು ನೋಡಿದರೆ ಮೊಗದಲ್ಲಿ ನಗು ಮೂಡುತ್ತದೆ.

ಜೆಲಿಟಿನ್ ಹೆಸರಿನ ವಿಯೆನ್ನಾದ ಕಲಾವಿದರ ಸಮೂಹವೊಂದು ಈ ಮೊಲವನ್ನು ಹೆಣೆದಿದೆ. ಜನರು ಇದರ ಮೇಲೇರಿ ಹತ್ತಿ, ಹೊಟ್ಟೆ ಮೇಲೆ ವಿರಮಿಸಲು ಹಾಗೂ ಆಟವಾಡಲು ಈ ಹೊರಾಂಗಣ ಕಲಾಕೃತಿಯನ್ನು ನಿರ್ಮಿಸಿದ್ದಾರಂತೆ. ಈ ಮೊಲ 200 ಅಡಿ ಉದ್ದ ಹಾಗೂ ಸುಮಾರು 20 ಅಡಿ ದಪ್ಪನಾಗಿದೆ. ಇದನ್ನು ಜಲ ನಿರೋಧಕವಿರುವ ಮೆತ್ತನೆಯ ಬಟ್ಟೆಯಿಂದ ತಯಾರಿಸಿ, ಒಳಗೆ ಹುಲ್ಲನ್ನು ತುಂಬಲಾಗಿದೆ.

ಬೊಂಬೆ ಬನ್ನಿ 2005 ರಲ್ಲಿ ಬೆಟ್ಟದ ಮೇಲೆ ಕಾಣಿಸಿಕೊಂಡಿದೆ. ಮೊದಲು ಗಾಢ ಗುಲಾಬಿ ಬಣ್ಣದ್ದಾಗಿದ್ದ ಈ ಮೊಲವು ಈಗ ಮಾಸಲು ಬಣ್ಣಕ್ಕೆ ತಿರುಗಿ, ನಿಧಾನವಾಗಿ ಕೊಳೆಯುತ್ತಾ ಭೂಮಿಯನ್ನು ಸೇರುತ್ತಿದೆ. ಇದು 2025 ರಲ್ಲಿ ಪೂರ್ತಿ ಮರೆಯಾಗುವುದೆಂದು ಅಂದಾಜು ಮಾಡಲಾಗಿದೆ. ಇದನ್ನು ಸ್ಥಳಾಂತರಿಸುವ ಅಥವಾ ರಕ್ಷಿಸುವ ಯಾವುದೇ ಯೋಜನೆ ಸದ್ಯಕ್ಕೆ ಕಾಣುತ್ತಿಲ್ಲ.

■ ವಿನಯ್‌ಕುಮಾರ್ ಬಿ.ಹೆಚ್.